**ದಿನಾಂಕ: 07.04.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ಎಂ ಹೆಚ್ ವಕೀಲರಿಂದಃ**

3. ಆರೋಪಿ ನನ್ನ ವಿರುದ್ದ ಹಾನಗಲ್ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿಲಾದ ಪಿ ಸಿ ನಂಬರ 325/2024 ರ ಪ್ರಕರಣಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಧಾರವಾಡ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡಯಾಜ್ಞೆ ತಂದಿರುತ್ತೇನೆ ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ತಡಯಾಜ್ಞೆ ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನನ್ನ ತಂದೆಗೆ ಮುಂಡಗೋಡ ಗ್ರಾಮದ ಮರಗಡಿ ಗ್ರಾಮದಲ್ಲಿ ಸರ್ವೆ ನಂಬರ 29/1 ರಲ್ಲಿ 37 ಗುಂಟೆ ಜಮೀನ ಇದೆ ಎಂದರೆ ಸರಿ. ಅದೇ ಸರ್ವ ನಂಬರಲ್ಲಿ ಮಹ್ಮದಜಾಫರ ತಂದೆ ಇಮಾಮಸಾಬ ರವರಿಗೂ ಸಹ 23 ಗುಂಟೆ 6 ಆಣೆ ಜಮೀನು ಇದೆ ಎಂದರೆ ಸರಿ. ಆ ಜಮೀನುಗಳನ್ನು ಆರೋಪಿಯ ತಂದೆಗೆ ಮಾರಾಟ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಆಸ್ತಿಯ ಸಂಬಂಧ ಆರೋಪಿಯ ತಂದೆ ನನ್ನ ತಂದೆಗೆ ಹಣ ಕೊಟ್ಟಿರುತ್ತಾರೆ

ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ ಒಟ್ಟು ಕುಟುಂಬದಲ್ಲಿಯೇ ವಾಸವಾಗಿರುತ್ತವೆ. ನನ್ನನ ತಂದೆ ಸರ್ವೆ ನಂಬರ 29/1 ರ 37 ಗುಂಟೆ ಜಮೀನನ್ನು ಆರೋಪಿಯ ತಂದಗ ರೂ.11 ಲಕ್ಷದ 33 ಸಾವಿರದ 625/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಮಹ್ಮದಜಾಫರ ರವರ ತಂದೆ ಸರ್ವೆ 29/1 ರ 23 ಗುಂಟೆ 06 ಆಣೆ ಜಮೀನನ್ನು ಆರೋಪಿಯ ತಂದೆಗೆ ರೂ.7 ಲಕ್ಷದ 4 ಸಾವಿರಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಸಂಬಂಧವಾಗಿ ಮುಂಡಗೋಡ ಉಪನೋಂದಣಾಧಿಕಾರಿ ಕಚೇರಿಯಲ್ಲಿ ದಿನಾಂಕ 25.02.2023 ರಂದು ಕ್ರಯ ಪತ್ರ ನೋಂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಮ್ಮ ಜಮೀನನ್ನು ಕಡಿಮೆ ಬೆಲೆಗೆ ಖರೀದಿಸಿರುತ್ತಾರೆ ಎಂಬ ಉದ್ದೇಶದಿಂದ ಆರೋಪಿಯ ಅಣ್ಣನಿಗೆ ಮಹ್ಮದಜಾಫರವರು ಭೇಟಿ ನೀಡಿ ಎರಡು ಚೆಕ್ ಗಳನ್ನು ತೆಗೆದುಕೊಂಡು ಬಂದು ತಾನು ಮತ್ತು ನನ್ನ ಮೂಲಕ ಎರಡು ಚೆಕ್ ಪ್ರಕರಣಗಳನ್ನು ಆರೋಪಿಯ ವಿರುದ್ಧ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬ ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಆರೋಪಿಗೆ ಹಣ ಕೊಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ 2023 ರಂದು ನನ್ನಿಂದ ಹಣ ಕೇಳಿದರು. ಆರೋಪಿ ಹಣ ಕೇಳಿದ 15 ದಿನಗಳ ಒಳಗಾಗಿ ಹಣ ಕೊಟ್ಟಿರುತ್ತೇನೆ. ನಾನು ಅದೇ ತಿಂಗಳಿನಲ್ಲಿ ಹಣ ಕೊಟ್ಟಿರುತ್ತೇನೆ ಆದರೆ ದಿನಾಂಕ ಮತ್ತು ತಿಂಗಳು ಈಗ ನನಗೆ ನೆನಪಿಲ್ಲ. ನಾನು ಆ ಹಣವನ್ನು 1 ಲಕ್ಷ ಹಾಗೂ 50 ಸಾವಿರ ಗಳ ಮೂಲಕ ನೀಡಿರುತ್ತೇನೆ. ನಾನು ಯಾವ ಯಾವ ದಿನಾಂಕದಂದು ಎಷ್ಟು ಎಷ್ಟು ಹಣ ಕೊಟ್ಟೆನು ಎಂಬುದು ನನಗೆ ಈಗ ನೆನಪಿಲ್ಲ. ಆ ಹಣವನ್ನು ನಾನು ಹಂತ ಹಂತವಾಗಿ ಕೊಟ್ಟಿರುವ ಬಗ್ಗೆ ದೂರಿನಲ್ಲಿ ಬರೆಸಿರುವುದಿಲ್ಲ. ನಾನು ಯಾವ ಮುಖಬೆಲೆಯ ನೋಟುಗಳನ್ನು ಆರೋಪಿಗೆ ಕೊಟ್ಟೆನು ಎಂಬುದು ಈಗ ಹೇಳಲು ಬರುವುದಿಲ್ಲ. ಆ ಹಣವನ್ನು ದಿನಾಂಕ 10.09.2024 ರಂದು ವಾಪಸ್ಸು ಕೊಡುವಂತೆ ಆರೋಪಿಯನ್ನು ಕೇಳಿರುತ್ತೇನೆ. ದಿನಾಂಕ 10.09.2024 ರಂದು ಆರೋಪಿ ಚೆಕ್ ಕೊಟ್ಟರು. ನಿಪಿ-1 ರ ಮೇಲಿರುವ ಅಕ್ಷರ ಮತ್ತು ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ.

4. ನನಗೆ ಆರೋಪಿ ಚೆಕ್ ನೀಡದೇ ಇದ್ದರೂ ಸಹ ಚೆಕ್ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಎಂದೂ ಸಹ ಹಣ ಕೊಟ್ಟಿರುವುದಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿದರು ಎಂಬುದು ನನಗೆ ಗೊತ್ತಿಲ್ಲ ನನ್ನ ಕುಟುಂಬಕ್ಕೆ ಬಿ ಪಿ ಎಲ್ ಪಡಿತರ ಚೀಟಿ ಇದೆ. ನಾನು ಆರೋಪಿಗೆ ಹಣ ಕೊಡದೇ ಇದ್ದರೂ ಸಹ ನನ್ನ ಸಹೋದರ ಮಹ್ಮದಜಾಫರ್ ರವರ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ./20**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | | ಡಿಡಬ್ಲ್ಯೂ | |
| ತಂದೆ:ಗಂಡನ ಹೆಸರು | : | | | |
| ವಯಸ್ಸು | : | ವರ್ಷ | | |
| ಉದ್ಯೋಗ | : | | | |
| ವಾಸ ಸ್ಥಳ | : | | | |

**ದಿನಾಂಕ:05.11.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ವಕೀಲರಿಂದಃ**

.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ವಕೀಲರಿಂದಃ**

.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.340/2023**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ರಂಜನಿ ಎ., | ಡಿಡಬ್ಲ್ಯೂ | 1 |
| ತಂದೆ:ಗಂಡನ ಹೆಸರು | : | ವಿಶ್ವನಾಥ ಪಠಾರಿ | | |
| ವಯಸ್ಸು | : | 32 ವರ್ಷ | | |
| ಉದ್ಯೋಗ | : | ವ್ಯಾಪಾರ | | |
| ವಾಸ ಸ್ಥಳ | : | ಬೆಟ್ಟಂಪಾಡಿ ಗ್ರಾಮ, ಪುತ್ತೂರು ತಾಲೂಕು ದಕ್ಷಿಣ ಕನ್ನಡ ಜಿಲ್ಲೆ | | |

**ದಿನಾಂಕ:27.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿತರ ಪರ ಶ್ರೀ.ಆರ್ ವಿ ಡಬ್ಲ್ಯೂ ವಕೀಲರಿಂದ:**

ನಾನು 1 ನೇ ಆರೋಪಿಯಿದ್ದು 2 ನೇ ಆರೋಪಿಯ ಪರವಾಗಿಯೂ ಸಹ ನಾನು ಸಾಕ್ಷಿ ನುಡಿಯುತ್ತಿದ್ದೇನೆ. 2 ನೇ ಆರೋಪಿ ನನ್ನ ತಂಗಿ. ನಾನು ಮತ್ತು 2 ನೇ ಆರೋಪಿ ಕೂಡಿಕೊಂಡು ಒಂದು ಕೋಳಿ ಫಾರಮ್ ಮತ್ತು ಕೋಳಿ ಆಹಾರವನ್ನು ಉತ್ಪಾದಿಸುವ ವ್ಯವಹಾರ ಮಾಡುತ್ತಿದ್ದೆವು. ನಾವು ಶ್ರೀ ಆದಿಶಕ್ತಿ ಪಾಲುದಾರಿಕೆ ಎಂಬ ಹೆಸರಿನಲ್ಲಿ ಈ ವ್ಯವಹಾರ ನಡೆಸುತ್ತಿದ್ದೆವು. ಆ ಕೋಳಿ ಫಾರಮನ್ನು ಮೇ 2022 ರಂದು ಮುಕ್ತಾಯಗೊಳಿಸಿರುತ್ತೇವೆ. ನಮಗೆ ದೂರುದಾರರ ಪರಿಚಯ ಇದೆ. ನಾವು ದೂರುದಾರರ ಗೋವಿನ ಜೋಳದ ಖರೀದಿ ವ್ಯವಹಾರವನ್ನು ಮಾಡಿರುತ್ತೇವೆ. ನಾವು ಸುಮಾರು 1 ವರ್ಷಗಳ ಕಾಲ ದೂರುದಾರರ ಜೊತೆ ಗೋವಿನ ಜೋಳದ ಖರೀದಿ ವ್ಯವಹಾರವನ್ನು ಮಾಡಿರುತ್ತೇವೆ. ನಾವು ದೂರುದಾರರ ಜೊತೆ ಸುಮಾರು ಲಕ್ಷಾಂತರ

ರೂ.ಗಳ ವ್ಯವಹಾರ ಮಾಡಿರುತ್ತೇವೆ. ನಾವು ದೂರುದಾರರಿಂದ ಖರೀದಿಸಿದ ಗೋವಿನ ಜೋಳಕ್ಕೆ ಸಂಬಂದಪಟ್ಟ ಹಣವನ್ನು ಬ್ಯಾಂಕ್ ಮೂಲಕ ಮತ್ತು ಆ ಲಾರಿ ಚಾಲಕರ ಮೂಲಕ ಸಹ ನಗದು ರೂಪದಲ್ಲಿ ದೂರುದಾರರಿಗೆ ಹಣ ಕೊಟ್ಟಿರುತ್ತೇವೆ. ನಾವು ದೂರುದಾರರಿಗೆ ಆ ಗೋವಿನ ಜೋಳದ ಬಾಬ್ತು ರೂ. 3,15,982/- ಗಳಿಗೆ ಒಂದು ಚೆಕ್ ನ್ನು ಕೊಟ್ಟಿರುತ್ತೇವೆ. ದಿನಾಂಕ 15.05.2022 ರಂದು ನಮ್ಮ ಮತ್ತು ದೂರುದಾರರ ನಡುವೆ ಲೆಕ್ಕ ಪತ್ರ ಮುಕ್ತಾಯವಾದ ನಂತರ ಆ ಚೆಕ್ ನ್ನು ದೂರುದಾರಿಗೆ ನೀಡಿರುತ್ತೇವೆ. ಅದೇ ದಿನ ಆ ಚೆಕ್ ನ್ನು ದೂರುದಾರರಿಗೆ ನೀಡಿರುತ್ತೇವೆ. ನಾವು ದೂರುದಾರರಿಗೆ ಎಂದೂ ಸಹ ರೂ. 13,15,982/- ಗಳಿಗೆ ಚೆಕ್ ನ್ನು ನೀಡಿರುವುದಿಲ್ಲ. ದೂರುದಾರರ ಆ ಚೆಕ್ ನ ಮೇಲೆ ಮೊತ್ತವನ್ನು ತಿದ್ದುಪಡಿ ಮಾಡಿ ರೂ. 13,15,982/-ಕ್ಕೆ ನಮೂದಿಸಿಕೊಂಡಿರುತ್ತಾರೆ. ಆ ಚೆಕ್ ಬ್ಯಾಂಕ್ ಆಫ್ ಬರೊಎಾಡಾ ಶಾಖೆಗೆ ಸಂಬಂಧಿಸಿದ್ದಾಗಿರುತ್ತದೆ. ನಾವು ಎಂದೂ ಸಹ ದೂರುದಾರರಿಗೆ ವಿಜಯಾ ಬ್ಯಾಂಕ್ ಚೆಕ್ ನೀಡಿರುವುದಿಲ್ಲ. ನಾವು ದೂರುದಾರರ ಜೊತೆ ವ್ಯವಹಾರ ಮಾಡಿದ ಸಂದರ್ಭದಲ್ಲಿ ವಿಜಯಾ ಬ್ಯಾಂಕ್ ಅಸ್ತಿತ್ವದಲ್ಲಿ ಇರಲಿಲ್ಲ. ಆದ್ದರಿಂದ ದದೂರುದಾರರ ಸಲ್ಲಿಸಿದ ದೂರನ್ನು ಮಾನಸಿಕ ದೈಹಿಕ ಹಾಗೂ ಆರ್ಥಿಕ ತೊಂದರೆ ಉಂಟಾಗಿರುವ ಕಾರಣ ದೂರನ್ನು ವಜಾ ಮಾಡಿ ನನಗೆ ಪರಿಹಾರ ಕೊಡಿಸಿಕೋಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ.ಎಸ್ ವಿ ಎಂ ವಕೀಲರಿಂದಃ**

ನನ್ನ ತಂದೆ ಚಾಲಕ ವೃತ್ತಿ ಮಾಡುತ್ತಾರೆ. ನಾನು 2021 ರಂದು ನಾವು ಶ್ರೀ ಆದಿಶಕ್ತಿ ಪಾಲುದಾರಿಕೆ ಸಂಸ್ಥೆಯನ್ನು ತೆರೆದಿರುತ್ತೇವೆ. ನಾನು ಮತ್ತು 2 ನೇ ಆರೋಪಿ ಆ ಪಾಲುದಾರಿಕೆ ಸಂಸ್ಥೆಯ ಪಾಲುದಾರರಾಗಿರುತ್ತೇವೆ ನಮ್ಮನ್ನು ಹೊರತು ಪಡಿಸಿ ಬೇರೆ ಯಾರು ಸಹ ಪಾಲುದಾರರು ಇರುವುದಿಲ್ಲ. ನಾವು ದಿನಕ್ಕೆ ಎಷ್ಟು ಕ್ವಿಂಟಾಲ್ ಗೋವಿಜ ಜೋಳ ಖರೀದಿಸುತ್ತಿದ್ದೆವು ಎಂಬುದು ನನಗೆ ನೆನಪಿಲ್ಲ ಆದರೆ ಅವಶ್ಯಕತೆ ಇದ್ದ ಸಂದರ್ಭದಲ್ಲಿ ಖರೀದಿಸುತ್ತಿದ್ದೆವು ಎಂದು ಸ್ವತಃ ನುಡಿಯುತ್ತಾರೆ. ಆ ಕೋಳಿ ಆಹಾರ ತಯಾರಿಸುವ ಪ್ಲಾಂಟ್ ಉಪ್ಪಿನಂಗಡಿಯ ಪೇರನೆಯಲ್ಲಿ ಅಂಗಡಿಯನ್ನು ಬಾಡಿಗೆಗೆ ಪಡೆದುಕೊಂಡಿದ್ದೆವು. ನಮ್ಮ ಕಚೇರಿ ಮತ್ತು ಪ್ಲಾಂಟ್ ಬೇರೆ ಬೇರೆ ಸ್ಥಳಗಳಲ್ಲಿ ಇದ್ದವು. ಆ ಪ್ಲಾಂಟ್ ಗೆ ತಿಂಗಳಿಗೆ 65 ಸಾವಿರ ಬಾಡಿಗೆಗೆ ಕೊಡುತ್ತಿದ್ದೆವು. ಆ ಪ್ಲಾಂಟ್ ನಲ್ಲಿ

ಸುಮಾರು 11 ಜನ ಕೆಲಸಗಾರು ಇದ್ದರು. ಶ್ರೀ ಆದಿಶಕ್ತಿ ಪಾಲುದಾರಿಕೆಯನ್ನು ಸುಮಾರು 16 ಕೋಟಿ ಬಂಡವಾಳ ಹೂಡಿ ಪ್ರಾರಂಭಿಸಿದೆವು ಎಂದರೆ ಸರಿಯಲಲ. ಸಾಕ್ಷಿಯು ಸುಮಾರು 1 ಕೋಟಿಯಷ್ಟು ಬಂಡವಾಳ ಹೂಡಿದ್ದೆವು ಎಂದು ಸ್ವತಃ ನುಡಿಯುತ್ತಾರೆ. ಆ ಪ್ಲಾಂಟೇಷನ್ ಗೆ ಸಂಬಂಧಪಟ್ಟಂತೆ ನಾವು ಖರೀದಿಸಿದ ವಸ್ತುಗಳ ಬಗ್ಗೆ ರಜಿಸ್ಟರನ್ನು ನಿರ್ವಹಣೆ ಮಾಡಿರುತ್ತೇವೆ. ನಾವು ದೂರುದಾರರನ್ನು ಹೊರತು ಪಡಿಸಿ ಬೇರೆ ಕಡೆ ಗೋವಿನ ಜೋಳವನ್ನು ಖರೀದಿಸಿರುವುದಿಲ್ಲ. ನಾವು ಸುಗುಮಾ ಕಂಪನಿಯಿಂದ ಜೋಳವನ್ನು ಖರೀದಿಸಿರುವುದಿಲ್ಲ ಬದಲಾಗಿ ನೇರವಾಗಿ ಆಹಾರವನ್ನೇ ಖರೀದಿಸಿರುತ್ತೇವೆ. ನಾವು ಸುಗುಮಾ ಕಂಪನಿಯವರಿಂದ ಸುಮಾರು 6 ತಿಂಗಳುಗಳ ಕಾಲ ನೇರವಾಗಿ ಆಹಾರವನ್ನು ಖರೀದಿಸಿರುತ್ತೇವೆ. ಸುಗುಮಾ ಕಂಪನಿಯರ ಜೊತೆ ಸುಮಾರು 30 ರಿಂದ 40 ಲಕ್ಷ ವ್ಯವಹಾರ ಆಗಿರುತ್ತದೆ ಎಂದರೆ ಸರಿ ಸಾಕ್ಷಿಯು ನಿಗಧಿತವಾಗಿ ಎಷ್ಟು ವ್ಯವಹಾರ ಆಗಿರುತ್ತದೆ ಎಂದು ಈಗ ಹೇಳಲಾಗುವುದಿಲ್ಲ. ನಾವು ಯುನಿಕ್ ಎಂಟರ್ ಪ್ರೈಸಸ್ ರವರಿಂದ ಕೋಳಿ ಮರಿ ಮತ್ತು ಆಹಾರವನ್ನು ಖರೀದಿಸಿರುತ್ತೇವೆ. ಆ ಯುನಿಕ್ ಎಂಟರ್ ಪ್ರೈಸಸ್ ಮಾಲೀಕರ ಹೆಸರು ಅಶೋಕ ಭಟ್ ಆಗಿರುತ್ತದೆ. ಸುಗುಮಾ ಮತ್ತು ಯುನಿಕ್ ಎಂಟರ್ ಪ್ರೈಸಸ್ ರವನ್ನು ಹೊರತು ಪಡಿಸಿ ಬೇರೆ ಬೇರೆಯವರ ಜೊತೆ ವ್ಯವಹಾರ ಮಾಡಿರುತ್ತೇವೆ. ಈ ಸಂಸ್ಥೆಗಳ ಜೊತೆ ನಮ್ಮ ಪಾಲುದಾರಿಕೆ ವ್ಯವಹಾರ ಮಾಡಿ ಸುಮಾರು 50 ರಿಂದ 60 ಕೋಟಿ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು 2020 ರಿಂದ 22 ರ ಅವಧಿಯಲ್ಲಿ ಸುಮಾರು 6 ಕೋಟಿಯಷ್ಟು ವ್ಯವಹಾರ ಆಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ನಾವು ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಂದು ವರ್ಷ ಅವಧಿಗೆ ಆದಾಯ ತೆರಿಗೆ ರಿಟರ್ನಸನ್ನು ಸಲ್ಲಿಸಿರುತ್ತೇವೆ. ನಾವು ದೂರುದಾರರ ಜೊತೆಯಾಗಲಿ ಸುಗುಮಾ ಹಾಗೂ ಯುನಿಕ್ ಎಂಟರ್ ಪ್ರೈಸಸ್ ರವರ ಜೊತೆ ವ್ಯವಹಾರಗಳನ್ನು ಬ್ಯಾಂಕ್ ಆಫ್ ಬರೋಡಾ ಬೆಟ್ಟಂಪಾಡಿ ಶಾಖೆಯ ಕರೆಂಟ್ ಖಾತೆ ಸಂಖ್ಯೆ 7075020000171243 ಮೂಲಕವೇ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಆ ಹಣವನ್ನು ನಗದು ರೂಪದಲ್ಲಿಯೂ ಸಹ ಕೊಟ್ಟಿರುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ಈ ರೀತಿ ನಗದು ರೂಪದಲ್ಲಿ ಹಣ ಕೊಟ್ಟ ಸಂದರ್ಭದಲ್ಲಿಯೂ ಸಹ ಬಿಲ್ಲುಗಳನ್ನು ಹಾಕುತ್ತೇವೆ. ಈ ಬಗ್ಗೆ ನಮ್ಮ ಆದಾಯ ತೆರಿಗೆ ರಿಟರ್ನನಲ್ಲಿ ತೋರಿಸಿರುತ್ತೇವೆ. ನಾವು

ವ್ಯವಹಾರ ಮಾಡುವ ಸಂದರ್ಭದಲ್ಲಿ ದೂರುದಾರರು ಸಗುಮಾ ಹಾಗೂ ಯುನಿಕ್ ಎಂಟರ್ ಪ್ರೈಸಸ್ ರವರ ಜೊತೆ ಫೋನ್ ಮೂಲಕವು ಸಹ ವ್ಯವಹಾರ ಮಾಡುತ್ತೇವೆ ಎಂದರೆ ಸರಿ. ಆ ಪ್ರಕಾರ ಲಾರಿ ಮೂಲಕ ಸರಕುಗಳು ಬಂದಿದ್ದವು ಈ ಬಗ್ಗೆ ಲಾರಿ ಬಾಡಿಗೆಯನ್ನು ಮಾತ್ರ ಕೊಡುತ್ತೇವೆ ಎಂದರೆ ಸಾಕ್ಷಿಯು ಬಾಡಿಗೆ ಜೊತೆಗೆ ಸರಕಿನ ಹಣವನ್ನು ಸಹ ಅವರ ಜೊತೆ ಕೊಡುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪ್ರತಿ ತಿಂಗಳು ಪುತ್ತೂರಿಗೆ ಹೋಗುತ್ತೇವೆ. ಪುತ್ತೂರಿನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಯದಲ್ಲಿ ನಮ್ಮ ವಿರುದ್ದ ರೂ. 52 ಲಕ್ಷಕ್ಕೆ ಒಂದು ಚೆಕ್ ಪ್ರಕರಣ ದಾಖಲಾಗಿ ಆ ನಾಯಾಲಯಕ್ಕೆ ಹೋಗುತ್ತಿದ್ದೇವೆ ಎಂದರೆ ಸರಿ. ಆ ದೂರನ್ನು ಯುನಿಕ್ ಎಂಟರ್ ಪ್ರೈಸಸ್ ರವರು ನಮ್ಮ ವಿರುದ್ದ ಸಲ್ಲಿಸಿರುತ್ತಾರೆ. ನಾವು ಯುನಿಕ್ ಎಂಟರ್ ಪ್ರೈಸಸ್ ರವರಿಗೆ ನೀಡಬೇಕಾಗಿದ್ದ ರೂ.52 ಲಕ್ಷ ಕೊಡದೇ ಇರುವ ಕಾರಣ ಚೆಕ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಕ್ಷಿಯು ನಾವು ವರಿಗೆ ಎಷ್ಟು ಹಣ ಕೊಡಬೇಕೆಂಬುದು ಸಂಶಯದಿಂದ ಕೂಡಿರುವುದರಿಂದ ಮತ್ತು ಈ ಬಗ್ಗೆ ನಾವು ಖಾಲಿ ಚೆಕ್ ಕೊಟ್ಟಿದ್ದ ಕಾರಣ ಅವರು ತಮ್ಮ ಇಚ್ಚೆಗೆ ಬಂದಂತೆ ಚೆಕ್ ಬರೆದುಕೊಂಡು ಪ್ರಕರಣ ದಾಖಲಿಸಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಅದೇ ರೀತಿ ಮಂಗಳೂರು ನ್ಯಾಯಾಲಯದಲ್ಲಿ ರೂ. 3 ಲೆಕ್ಕೆ ಮತ್ತೊಂದು ಚೆಕ್ ಪ್ರಕರಣ ದಾಖಲಾಗಿದ್ದು ಅದನ್ನು ಕೋಸ್ಟಲ್ ಫಾರ್ಮ ರವರು ನಮ್ಮ ಪಾಲುದಾರಿಕೆ ಸಂಸ್ಥಯ ವಿರುದ್ದ ದಾಖಲಿಸಿದ್ದು ಆ ಪ್ರಕರಣವನ್ನು ಇನ್ನೂ ಸಹ ವಿಚಾರಣೆಗೆ ಬಾಕಿ ಇದೆ ಆದರೆ ಅದೇ ನ್ಯಾಯಾಲಯದಲ್ಲಿ ಮತ್ತೊಂದು ಚೆಕ್ ಪ್ರಕರಣ ರೂ. 1 ಲಕ್ಷ 25 ಸಾವಿರ ಗಳಿಗೆ ದಾಖಲಿಸಿದ್ದು ಅದನ್ನು ರಾಜೀ ಮೂಲಕ ಬರೆಹರಿಸಿಕೊಂಡಿಡಿರುತ್ತೇವೆ. ಈ ಪ್ರಕಣಣಗಳನ್ನು ಹೊರತು ಪಡಿಸಿ ಬೇರೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದಿಲ್ಲ. ಸುಗುಮಾ ಕಂಪನಿಯವರು ನಮ್ಮ ವಿರುದ್ದ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ ಈ ಬಗ್ಗೆ ನೋಟಿಸು ಕೂಡ ಬಂದಿರುವುದಿಲ್ಲ.

(**ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್